ಶ್ರೀ ಸಿ.ಎಂ. ಉದಾಸಿ : ಈ ಕೆಲಸಕಾರ್ಯಗಳ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತಂದಿದ್ದೇವೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರು ಹೇಳಿದ್ದನ್ನು ಕೂಡ ನಾನು ಆಗ ಹೇಳಿದ್ದೆ. We will take up this matter for a detailed discussion. ಇವೊತ್ತು ಅದು ಕಾಕತಾಳೀಯ ಇರಬಹುದು, ಮಾನ್ಯ ಉದಾಸಿಯವರು ಆ ಇಲಾಖೆಯನ್ನು ವಹಿಸಿಕೊಂಡಿರಬಹುದು. ಆದರೆ ಈ ವಿಚಾರದಲ್ಲಿ ಮೊದಲಿನಿಂದಲೂ ಹೀಗೆ ನಡೆದುಕೊಂಡು ಬಂದಿರುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರ ಕ್ಷೇತ್ರಕ್ಕೂ ಕೂಡ ಕಡಿಮೆ ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವಾದರೂ ಸದನದಲ್ಲಿ ನನ್ನ ಪರವಾಗಿ ಮಾತನಾಡಿದ್ದೀರಿ. ಬೇರೆಯವರು ಯಾರೂ ನನ್ನ ಪರವಾಗಿ ಮಾತನಾಡಲಿಲ್ಲ. ನೀವು ನನ್ನ ಪರವಾಗಿ ಇದ್ದೀರಿ , ಆ ವಿಚಾರವನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ.ಎಂ. ಉದಾಸಿ : ನನ್ನ ಕ್ಷೇತ್ರಕ್ಕೂ ಕೂಡ ಕಡಿಮೆ ಹಣ ಇಟ್ಟಿದ್ದೇವೆ. ಅದು ಬೇರೆ ಪ್ರಶ್ನೆ. ನಾನು ಹೇಳುತ್ತಿರುವುದೇನೆಂದರೆ, ಈ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಇದು ಪ್ರತಿಯೊಂದು ವಿಧಾನಸಭಾಕ್ಷೇತ್ರಕ್ಕೂ ಇಷ್ಟು ಮೊತ್ತ ಎಂದು ಸೀಮಿತಗೊಳಿಸಿ ಮಾಡಿದ ವ್ಯವಸ್ಥೆಯಲ್ಲ. ಉದಾಹರಣೆಗೆ ಕೆಲವು ಕಡೆಗಳಲ್ಲಿ ಮಿನಿವಿಧಾನಸೌಧ ಬರಬಹುದು, ಆಸ್ಪತ್ರೆ ಕಟ್ಟಡಗಳು ಬರಬಹುದು, ಸೇತುವೆಗಳು ಬರಬಹುದು ರಸ್ತೆಗಳು ಬರಬಹುದು, ನ್ಯಾಯಾಲಯಗಳ ಕಟ್ಟಡಗಳು ಬರಬಹುದು, ಕಚೇರಿ ಕಟ್ಟಡಗಳು ಬರಬಹುದು, ಹೀಗೆ ದೊಡ್ಡ ಕೆಲಸಗಳು ಬಂದಾಗ ಹೆಚ್ಚು ಹಣ ಒಂದು ಕ್ಷೇತ್ರಕ್ಕೆ ಹೋಗುವುದು ಸಹಜ. ಇದನ್ನು ತಾವುಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

## ಕಮಲಾಪುರ ಕ್ಷೇತ್ರದ ರಸ್ತೆಗಳು

305 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದ ಅಳಂದ, ವಿ.ಕೆ. ಸಲಗರ, ಮಾಂಗಾವೆ, ಚಿಂಚೋಳಿ, ರಸ್ತೆಗಳು ತೀರಾ ಹದಗೆಟ್ಟಿದ್ದು, ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದರೆ ಇದನ್ನು ಸರಿಪಡಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?*

ಇ) *ಗುಲ್ಬರ್ಗಾದಿಂದ ಬಸವ ಕಲ್ಯಾಣ ಅಂಬಡಗಾ ಕ್ರಾಸ್‌ನಿಂದ 7 ಕಿ.ಮೀ ಡಾಂಬರೀಕರಣ ಬೆಂಡಿಂಗ್ ಇದ್ದು, ಯಾವಾಗ ಡಾಂಬರೀಕರಣ ಮಾಡಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ. ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲ್ಲೂಕಿನಲ್ಲಿ ಹಾದು ಹೋಗುವ ಈ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಅನುದಾನದ ಲಭ್ಯತೆಯ ಮೇಲೆ ಪರಿಶೀಲಿಸಲಾಗುವುದು.

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕಾಗದದಲ್ಲಿರುವ ಉತ್ತರವನ್ನು ಮಾತ್ರ ಒದಗಿಸಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದಲ್ಲಿ ಆಳಂದ ತಾಲ್ಲೂಕದಿಂದ ವಿ.ಕೆ. ತಲಗರ್, ಮಹಗಾಂ ಚಿಂಚೋಳಿ ರಸ್ತೆ, ಇವುಗಳು ಹೇವಿ ರೋಡ್‌ಗಳು ಎಂದು ಆಗಿವೆ. ಆದರೆ ಅದು ಕೇವಲ ಕಾಗದದಲ್ಲಿ ಮಾತ್ರ ಇದೆ. ಆ ರಸ್ತೆಗಳನ್ನು ಅಧಿಕಾರಿಗಳು ನೋಡದೇ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ. ಆ ರಸ್ತೆಯು ನನ್ನ ಸ್ವಂಥ ಊರು ಬೆಳಮಗಿಯೂ ಸೇರಿದಂತೆ ಬೇರೆ ಊರುಗಳೂ ಇವೆ. ನಾನು ನಮ್ಮ ಊರಿಗೆ ಹೋದಾಗ ಜನರು ನನಗೆ ಚೀಮಾರಿ ಹಾಕುತ್ತಾರೆ. ನೀವು ಎಂಎಲ್‌ಎ ಆಗಿದ್ದು ಈ ರಸ್ತೆಗಳನ್ನು ನೋಡಿ ಎಂದು ಹೇಳುತ್ತಾರೆ. ಮೊನ್ನೆ ಒಂದು ಸಂದರ್ಭದಲ್ಲಿ ನಾನು ಊರಿಗೆ ಹೋಗಿದ್ದಾಗ ಸುತ್ತಮುತ್ತಲಿನ ಹಳ್ಳಿಯ ಜನರು ಬಂದು ನನಗೆ ಚೀಮಾರಿ ಹಾಕಿದರು. ಈ ಮಾತನ್ನು ನಾನು ಬಹಳ ನೊಂದು ಹೇಳುತ್ತಾ ಇದ್ದೇನೆ. ನಾನು ಹೊಸದಾಗಿ ಶಾಸಕನಾಗಿ ಬಂದಿದ್ದೇನೆ. ಸಚಿವರಿಗೆ ಅಧಿಕಾರಿವರ್ಗದವರು ಬಹಳ ತಪ್ಪು ಮಾಹಿತಿಗಳನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಆಳಂದ ತಾಲ್ಲೂಕಿನಲ್ಲಿ ಹಾದು ಹೋಗುವ ರಸ್ತೆಯು ವಾಹನಸಂಚಾರಕ್ಕೆ ಯೋಗ್ಯವಾಗಿದೆ ಎಂದು ಕೊಟ್ಟಿದ್ದಾರೆ. ಹೀಗೆ ಅಯೋಗ್ಯ ರಸ್ತೆಯನ್ನು ಯೋಗ್ಯವಾದ ರಸ್ತೆ ಎಂದು ಕೊಟ್ಟಿರುವುದು ತಪ್ಪು ಇದೆ. ಸಚಿವರೇ ಬಂದು ಈ ರಸ್ತೆಗಳನ್ನು ನೋಡಿಕೊಂಡು ಹೋಗಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರು ಹೇಳುವ ಹಾಗೆ ರಸ್ತೆಗಳು ಅಲ್ಲಿ ಸರಿ ಇಲ್ಲ. ಆದರೆ ಭಾಷಣ ಮಾಡಿ ಹೇಳುವುದು ಬೇಡ. ರೇವು ನಾಯಕರವರ ಸಹಕಾರಕ್ಕೆ ನಾನು ಇದ್ದೇನೆ. ನಿಮ್ಮ ಅಧಿಕಾರಿಗಳು ಆ ರಸ್ತೆಯು ಸಂಚಾರಕ್ಕೆ ಯೋಗ್ಯವಾಗಿವೆ ಎಂದು ಕೊಟ್ಟಿದ್ದಾರೆ. ನಿಜವಾಗಿಯೂ ಆ ರಸ್ತೆಗಳು ಯೋಗ್ಯ ಇಲ್ಲ. ಬಹಳ ಹೀನಸ್ಥಿತಿಯಲ್ಲಿ ಇದೆ. ನಾನು ಸದಸ್ಯನಾಗಿ ಅಲ್ಲಿಗೆ ಹೋದರೆ ಕ್ಷೇತ್ರದ ಜನರು ನನಗೆ ಚೀಮಾರಿ ಹಾಕುತ್ತಾರೆ... ಎಂದು ಹೇಳುತ್ತಿದ್ದಾರೆ he is a man chosen from a reserved constituency ಜನರು ಅವರಿಗೆ ನಿಮಗೆ ಓಟು ಕೊಟ್ಟಿದ್ದೇವೆ ರಸ್ತೆಗಳು ಸರಿಯಾಗಿಲ್ಲ ಎಂದು ಹಿಂಸೆ ಮಾಡುತ್ತಾರೆ. ಆದ್ದರಿಂದ ಸಚಿವರು ದಯಮಾಡಿ try to come to his rescue.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ, ನಾನೇ ಸ್ವತಃ ಅಲ್ಲಿಗೆ ಹೋಗಿ ಬಂದು ರಸ್ತೆಗಳ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಸ್ವತಃ ಅಲ್ಲಿಗೆ ಬಂದು ಖುದ್ದಾಗಿ ಪರಿಶೀಲನೆ ಮಾಡಿ ಆ ರಸ್ತೆಗೆ ಬೇಕಾಗಿರತಕ್ಕಂಥ ಕೆಲಸವನ್ನು ಮಾಡಿಸಿಕೊಡುತ್ತಾರೆ. ಆಗಬಹುದಲ್ಲವೆ?

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ,ಆಗಬಹುದು ಆದರೆ ಅದನ್ನು ಆದಷ್ಟು ಬೇಗನೆ ಮಾಡಿಸಿಕೊಡಬೇಕು.